

بسم اللہ الرّحمٰن الرّحیم

# ಖಿಲಾಫತ್‌ನೊಂದಿಗೆ ಪರಿಪೂರ್ಣ ಹಾಗೂ ನಿಶ್ಶರ್ತ ವಿಧೇಯತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06-06-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ತಿಲಾವತ್ ಮಾಡಿದರು.

**ಅಫಲಾ ಯನ್‌ಝುರೂನ ಇಲಲ್ ಇಬಿಲಿ ಕೈಫ ಖುಲಿಖತ್**
**ವ ಇಲಸ್ಸಮಾಇ ಕೈಫ ರುಫಿಅತ್**
**ವ ಇಲಲ್ ಜಿಬಾಲಿ ಕೈಫ ನುಸಿಬತ್**
**ವ ಇಲಲ್ ಅರ್‌ಝಿ ಕೈಫ ಸುತಿಹತ್.**

ಅರ್ಥ: ಅವರು ಒಂಟೆಯ ಕಡೆಗೆ ನೋಡುವುದಿಲ್ಲವೇ? ಅದು ಹೇಗೆ ಸೃಷ್ಟಿಸಲ್ಪಟ್ಟಿದೆಯೆಂದು? ಆಕಾಶ ಹೇಗೆ ಉನ್ನತಗೊಳಿಸಲ್ಪಟ್ಟಿದೆಯೆಂದೂ? ಪರ್ವತಗಳು ಹೇಗೆ ಇರಿಸಲ್ಪಟ್ಟಿವೆಯೆಂದೂ? ಭೂಮಿ ಹೇಗೆ ವಿಶಾಲಗೊಳಿಸಲ್ಪಟ್ಟಿದೆಯೆಂದೂ (ಅವರು ನೋಡುವುದಿಲ್ಲವೇ?).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರವಾದಿಯನ್ನು ಮತ್ತು ಇಮಾಮರನ್ನು ಅನುಸರಿಸುವ ಬಗ್ಗೆ ಮೇಲಿನ ವಚನಗಳ ವ್ಯಾಖ್ಯಾನದಲ್ಲಿ ವಿವರಿಸಿರುವರು. ಪ್ರವಾದಿ ಮತ್ತು ಇಮಾಮರನ್ನು ಅನುಸರಿಸುವುದು ಒಂಟೆಯೊಂದಿಗೆ ಹೇಗೆ ಸಂಬಂಧಿಸಿದೆ ಎಂದು ತೋರಬಹುದಾದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳು ಆಳವಾದ ಆಧ್ಯಾತ್ಮಿಕ ಅರ್ಥಗಳನ್ನೊಳಗೊಂಡಿವೆ. ಅರಬಿ ಭಾಷೆಯಲ್ಲಿ ಒಂಟೆಯನ್ನು ಸೂಚಿಸುವ ಅನೇಕ ಶಬ್ದಗಳಿವೆ. ಆದರೆ ಪವಿತ್ರ ಖುರ್‌ಆನ್‌ನ ಮೇಲಿನ ವಚನದಲ್ಲಿ ಬಳಸಲಾದ **ಇಬಿಲ್** ಎಂಬ ಪದ ಒಂದು ಬಹುವಚನ ನಾಮಪದವಾಗಿದೆ. ಅಲ್ಲಾಹನು ಒಂಟೆಗಳ ಸ್ವಭಾವ ಗುಣಗಳನ್ನು ಸೂಚಿಸಲು ಈ ಶಬ್ದವನ್ನು ಇಲ್ಲಿ ಬಳಸಿದ್ದಾನೆ. ಒಂಟೆಯು ಅನುಸರಣೆ ಬಗ್ಗೆ ಬಹಳ ನಿಷ್ಠಾವಂತ ಮೃಗವಾಗಿದೆ. ಒಂದು ಅನುಭವಿ ಒಂಟೆಯನ್ನು ಹಿಂಬಾಲಿಸಿಕೊಂಡು ಒಂಟೆಗಳು ದೀರ್ಘ ಸಾಲುಗಳಲ್ಲಿ ಪ್ರಯಾಣಿಸುತ್ತವೆ. ಮುಂದೆ ಸಾಗುವ ಒಂಟೆಯ ವೇಗಮಿತಿಯೊಳಗೆ ಪ್ರತಿಯೊಂದು ಒಂಟೆಯೂ ಸಾಲಿನಲ್ಲಿಯೇ ಸಂಚರಿಸುತ್ತದೆ. ಯಾವುದೇ ಒಂಟೆ ತನ್ನ ಮುಂದಾಳುವಾದ ಒಂಟೆಯನ್ನು ದಾಟಿಕೊಂಡು ಮುಂದೆ ಹೋಗಲು ಪ್ರಯತ್ನಿಸುವುದಿಲ್ಲ. ಕುದುರೆ ಮೊದಲಾದ ಇತರ ಪ್ರಾಣಿಗಳು ತಮ್ಮ ಮುಂದೆ ಇರುವವುಗಳನ್ನು ದಾಟಿಕೊಂಡು ಮುಂದೆ ಸಾಗಲು ಪ್ರಯತ್ನಿಸುತ್ತವೆ. ಆದುದರಿಂದ ಅಲ್ಲಾಹನು ಮೊದಲನೆಯ ವಚನದಲ್ಲಿ ಒಂಟೆಯ ಬಗ್ಗೆ ಬಹುವಚನವನ್ನು ಬಳಸಿಕೊಂಡು ಒಂಟೆಯ ಸ್ವಭಾವವನ್ನು ಸೂಚಿಸಿ ಐಕ್ಯತೆಯನ್ನು ಸ್ಥಾಪಿಸಲು ಒಬ್ಬ ಇಮಾಮರ ಆವಶ್ಯಕತೆ ಇದೆ ಎನ್ನುವುದನ್ನು ಇಲ್ಲಿ ಒತ್ತಿ ಹೇಳಿದ್ದಾನೆ. ಒಂಟೆಗಳು ಸಾಲುಗಟ್ಟಿ ಹೋಗುವುದು ಸೂಚಿಸುವುದೇನೆಂದರೆ ಜನರು ಜೀವಿತದ ಮಾರ್ಗದಲ್ಲಿ ಸಾಗಲು ಮತ್ತು ದಾರಿ ತಪ್ಪದಿರಲು ಒಬ್ಬ ಇಮಾಮರ ಆವಶ್ಯಕತೆ ಇದೆ ಎಂದಾಗಿದೆ. ಒಂಟೆಗಳು ದೀರ್ಘ ಪ್ರಯಾಣದ ಕಾಲದಲ್ಲಿ ನಿರ್ಲಕ್ಷ್ಯತೆಯಿಂದ ಇರುವುದಿಲ್ಲ. ಅದು ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ. ಇದೇ ರೀತಿ ಸತ್ಯವಿಶ್ವಾಸಿಗಳು ತಮ್ಮ ದೀರ್ಘ ಕಾಲದ ಯಾತ್ರೆಗಳಿಗೆ ಸಿದ್ಧತೆಗಳನ್ನು ಮಾಡಬೇಕು. ಅತ್ಯುತ್ತಮವಾದ ಸಿದ್ಧತೆಯು **ತಖ್ವಾ** (ಸಾತ್ವಿಕತೆ) ಆಗಿದೆ.

ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ನಮಗೆ ದೊರೆತಿದೆ. ಅವರು ನಿಧನ ಹೊಂದಿದ ನಂತರ ಖಿಲಾಫತ್ ವ್ಯವಸ್ಥೆ ನಮಗೆ ಲಭಿಸಿದೆ. ನಾವು ನಮಗೆ ದೊರೆತ ಈ ಭಾಗ್ಯವನ್ನು ಗಮನಿಸಬೇಕು ಮತ್ತು ನಾವು ಅದರ ಮೂಲಸತ್ವವನ್ನು ಮನವರಿಕೆ ಮಾಡಿಕೊಳ್ಳಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಹೆಸರಿನಲ್ಲಿ ಬೈಅತ್ ಸ್ವೀಕರಿಸುವವರು ಬರುತ್ತಲೇ ಇರುವರೆಂದು ಹೇಳಿದ್ದಾರೆ. ಆ ಮೂಲಕ ಅವರು ಖಿಲಾಫತ್ ವ್ಯವಸ್ಥೆಯನ್ನು ತನ್ನೊಂದಿಗೆ ಜೋಡಿಸಿರುವರು. ಪವಿತ್ರ ಖುರ್‌ಆನಿನ ಮೇಲಿನ ವಚನಗಳಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ವ್ಯಾಖ್ಯಾನದಿಂದ ತಿಳಿದು ಬರುವುದೇನೆಂದರೆ, ಬೈಅತ್ ಮಾಡುವವರ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸ್ಥಿರತೆ ಅವರು ಖಿಲಾಫತ್‌ನೊಂದಿಗೆ ಹೊಂದುವ ಸಂಬಂಧದೊಂದಿಗೆ ಜೋಡಿಸಲ್ಪಟ್ಟಿದೆ ಎಂದು. ಜಮಾಅತಿನ ಪ್ರಗತಿಗೋಸ್ಕರ ಮತ್ತು ಶೈತಾನೀ ಆಕ್ರಮಣಗಳನ್ನು ಎದುರಿಸಲು ಖಿಲಾಫತ್‌ನೊಂದಿಗೆ ಸಂಬಂಧವನ್ನು ಜೋಡಿಸುವುದು ಆವಶ್ಯಕವಾಗಿದೆ. **ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಇಮಾಮ್ ಒಬ್ಬ ಗುರಾಣಿಯ ಹಾಗಿದ್ದಾರೆಂದು ಹೇಳಿದ್ದಾರೆ**. ನಿಶ್ಚಯವಾಗಿಯೂ ಗುರಾಣಿಯ ಹಿಂದೆ ಸುರಕ್ಷಿತತೆ ಇರುತ್ತದೆ. ಗುರಾಣಿಯ ಹಿಂದೆ ಇರುವುದು ಎಂದರೆ ಪರಿಪೂರ್ಣವಾದ ಅನುಸರಣೆ ಎಂದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಸಹ ಹೇಳಿದರು: **"ನಾನು ನೇಮಿಸಿದ ಅಮೀರರನ್ನು ಅನುಸರಿಸುವವರು ನನ್ನನ್ನು ಅನುಸರಿಸುತ್ತಾರೆ. ಅಮೀರರನ್ನು ಅನುಸರಿಸದವರು ನನಗೆ ಅವಿಧೇಯತೆ ತೋರಿಸಿದವರಾಗುತ್ತಾರೆ**." ಪವಿತ್ರ ಖುರ್‌ಆನ್ ಸಹ ವಿಧೇಯತೆ ಬಗ್ಗೆ ಅನೇಕ ಸ್ಥಳಗಳಲ್ಲಿ ಆಜ್ಞಾಪಿಸಿದೆ. ನಿಜವಾಗಿಯೂ ಸಾಮುದಾಯಿಕ ವಿಜಯಕ್ಕೆ ಇರುವ ದಾರಿ ವಿಧೇಯತೆಯೇ ಆಗಿದೆ. ಈ ರಹಸ್ಯವನ್ನು ಜಮಾಅತಿನ ಸದಸ್ಯರು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದುದು ಅತೀ ಅಗತ್ಯವಾಗಿದೆ.

ಕೆಲವರು ಪ್ರಶ್ನೆ ಕೇಳುತ್ತಾರೆ. ನಮಗೆ ಕೆಲವು ವಿಷಯಗಳ ಬಗ್ಗೆ ಸ್ವಾತಂತ್ರ್ಯವೇಕಿಲ್ಲ. ನಾವು ಕೆಲವು ಪರಿಮಿತಿಗಳನ್ನು ಹೊಂದಿರುವುದೇಕೆ? ಎಂದು. ಅಹ್ಮದಿಯರು ನೆನಪಿಡಬೇಕಾದುದೇನೆಂದರೆ ನ್ಯಾಯ ಬದ್ಧವಾದ ಎಲ್ಲವನ್ನೂ ಇಸ್ಲಾಮ್ ಅನುಮತಿಸುತ್ತದೆ. ಆದರೆ, ನೈತಿಕ ಸುಧಾರಣೆಗೆ, ನೈತಿಕ ಅಭಿವೃದ್ಧಿಗೋಸ್ಕರ ಮತ್ತು ಐಕ್ಯತೆ ಸ್ಥಾಪಿಸಲು ಕೆಲವು ಮಿತಿಗಳನ್ನು ಹೇರಲಾಗಿದೆ. ಜಮಾಅತಿನ

ಅಭಿವೃದ್ಧಿಗೆ ಸಹಾಯಕರಾಗಲು ಜಮಾಅತಿನ ಹುದ್ದೇದಾರರು ಬಯಸುವುದಾದರೆ, ಅವರು ಎಲ್ಲರಿಗಿಂತಲೂ ಮಿಗಿಲಾಗಿ ಇಮಾಮರಿಗೆ ವಿಧೇಯರಾಗಬೇಕು. ಜಮಾಅತಿನ ಹುದ್ದೇದಾರರು ಎಲ್ಲಾ ಮಟ್ಟಗಳಲ್ಲೂ ಇದನ್ನು ಅರಿತುಕೊಂಡರೆ ಜಮಾಅತಿನ ಸದಸ್ಯರೆಲ್ಲರೂ ಇದನ್ನು ಮನವರಿಕೆ ಮಾಡಿಕೊಳ್ಳುವರು. ಜಮಾಅತಿನ ಎಲ್ಲರೂ ಸಾಲಿನಲ್ಲಿ ಸಾಗುವ ಒಂಟೆಗಳ ಹಾಗೆ ಕಾಣಿಸಿಕೊಳ್ಳುವರು. **ಅಮೀರರು, ಅಧ್ಯಕ್ಷರು ಮತ್ತು ಜಮಾಅತಿನ ಇತರ ಹುದ್ದೇದಾರರು ತಮ್ಮ ಅನುಸರಣೆಯ ಸ್ಥಿತಿಯ ಬಗ್ಗೆ ಆತ್ಮವಿಮರ್ಶೆ ನಡೆಸಬೇಕಾಗಿದೆ. ಮತ್ತು ಆಯಾ ಕಾಲದ ಖಲೀಫರ ಉಪದೇಶಗಳಿಗೆ ಹೇಗೆ ಪ್ರತಿಕ್ರಿಯೆ ನೀಡುತ್ತಿದ್ದೇವೆ ಎಂದು ಪರಾಮರ್ಶೆ ನಡೆಸಬೇಕಾಗಿದೆ. ಅವರು ಮಾರ್ಗದರ್ಶನಗಳನ್ನು ಕೂಡಲೆ ಪಾಲಿಸುತ್ತಿರುವರೋ ಅಥವಾ ಅವುಗಳಿಗೆ ತಮ್ಮದೇ ವ್ಯಾಖ್ಯಾನ ನೀಡುತ್ತಿರುವರೋ ಎಂದು ನೋಡಬೇಕು. ಕೆಲವು ಹುದ್ದೇದಾರರು ಆಯಾಕಾಲದ ಖಲೀಫರು ನೀಡುವ ಮಾರ್ಗದರ್ಶನಗಳನ್ನು ಪಾಲಿಸಲು ಸ್ವಲ್ಪಮಟ್ಟಿಗೆ ಸಂಕೋಚಪಡುತ್ತಾರೆ. ಇದು ಅನುಸರಣೆಯನ್ನು ಸೂಚಿಸುವುದಿಲ್ಲ. ಅನುಸರಣೆಯೆಂದರೆ, ಕೂಡಲೇ ಮಾಡಬೇಕಾದುದಾಗಿದೆ. ನಿಮಗೆ ನಿಮ್ಮ ಸ್ವಂತ ಅಭಿಪ್ರಾಯ ಇರಬಹುದು. ಆದರೆ ಆಯಾಕಾಲದ ಖಲೀಫರು ಒಂದು ವಿಷಯದ ಬಗ್ಗೆ ತೀರ್ಪು ನೀಡಿದರೆ ನೀವು ನಿಮ್ಮ ಸ್ವಂತ ಅಭಿಪ್ರಾಯವನ್ನು ಬದಿಗಿರಿಸಬೇಕಾಗಿದೆ**.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬರು ಹೀಗೆ ಹೇಳುತ್ತಿದ್ದರು: "**ಕೆಲವೊಮ್ಮೆ ಕೆಲವು ವಿಷಯಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ನಾನು ಖಲೀಫರೊಂದಿಗೆ ಹೇಳುತ್ತಿದ್ದೆ. ಒಂದು ವೇಳೆ ನನ್ನ ಅಭಿಪ್ರಾಯವನ್ನು ಖಲೀಫರು ತಿರಸ್ಕರಿಸಿದರೆ ನಾನು ನನ್ನ ಅಭಿಪ್ರಾಯವನ್ನು ಆಗಲೇ ತ್ಯಜಿಸುತ್ತಿದ್ದೆ. ಅದರ ಬಗ್ಗೆ ಯೋಚಿಸುತ್ತಲೇ ಇರಲಿಲ್ಲ**"

ಪರಿಪೂರ್ಣ ಅನುಸರಣೆ ಹೀಗೆಯೇ ಇರಬೇಕು. ಪರಿಪೂರ್ಣ ಅನುಸರಣೆ ಮೂಲಕ ಮಾತ್ರ ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಸೂಚಿಸಿದ ಆಧ್ಯಾತ್ಮಿಕ ಪದವಿಯನ್ನು ಗಳಿಸಲು ಸಾಧ್ಯ. ಬೈಅತ್ ಮಾಡುವವನು ಹೀಗೆ ಯೋಚಿಸಬೇಕು ಮತ್ತು ಅದಕ್ಕನುಸಾರವಾಗಿ ವರ್ತಿಸಬೇಕು. ಎಲ್ಲರಿಗಿಂತ ಮಿಗಿಲಾಗಿ ಹುದ್ದೇದಾರರು ಮೇಲಿನ ಅಂತಸ್ತಿನಿಂದ ಕೆಳಗಿನ ಅಂತಸ್ತಿನ ತನಕ ಅನುಸರಣೆಯ ಈ ಗುಣವನ್ನು ಪ್ರಕಟಿಸುವವರಾಗಬೇಕು.

ನನಗೆ ದೊರೆತ ಸಮಾಚಾರಗಳು ಸರಿಯಾಗಿದ್ದರೆ ಕೆಲವರು ಹೇಳುತ್ತಾರೆ: **ಪರಿಪೂರ್ಣ ಅನುಸರಣೆ ಪ್ರಾಯಶಃ ಹಾನಿಕರವಾಗಿದೆ. ಜರ್ಮನಿಯ ಚರಿತ್ರೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಹೀಗೆ ಹೇಳಲಾಗುತ್ತಿದೆ. ಅಡೋಲ್ಫ್ ಹಿಟ್ಲರನು ಜರ್ಮನರಿಂದ ಪರಿಪೂರ್ಣ ಅನುಸರಣೆಯನ್ನು ಆವಶ್ಯಪಟ್ಟಿದ್ದನು. ಅದರ ಪರಿಣಾಮವಾಗಿ ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಜರ್ಮನಿ ಸೋತು ಹೋಯಿತು**. ಆದರೆ ಅಹ್ಮದಿಯರು ಖಿಲಾಫತ್ ಮತ್ತು ನಿರಂಕುಶ ಏಕಾಧಿಪತ್ಯದ ಮಧ್ಯೆ ಬಹಳ ದೊಡ್ಡ ವ್ಯತ್ಯಾಸ ಇದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಅಹ್ಮದಿ, ಪ್ರತಿಯೊಬ್ಬ ಹೊಸ ಅಹ್ಮದಿ ಮತ್ತು ಪ್ರತಿಯೊಬ್ಬ ಅಹ್ಮದಿ ಯುವಕರು ಈ ವ್ಯತ್ಯಾಸವನ್ನು ಅರಿತುಕೊಳ್ಳಬೇಕು. ಕಾಲಘಟ್ಟದ ಇಮಾಮರನ್ನು ಸ್ವೀಕರಿಸಿದ ಜನರು ಅವರು ನಿಧನ ಹೊಂದಿದ ನಂತರ ಖಲೀಫರನ್ನು ಬೈಅತ್ ಮಾಡಿ ಖಿಲಾಫತ್ ವ್ಯವಸ್ಥೆ ಮುಂದುವರಿಸಲು ಪ್ರತಿಜ್ಞೆ ಮಾಡುತ್ತಾರೆ. ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂದು ಇಸ್ಲಾಮ್ ಉಪದೇಶಿಸುತ್ತದೆ. ಆದುದರಿಂದ ಒಬ್ಬನು ಸ್ವಂತ ಇಷ್ಟದಿಂದ ಪ್ರತಿಜ್ಞೆ ಮಾಡುವಾಗ ಆ ಪ್ರತಿಜ್ಞೆಯನ್ನು ಈಡೇರಿಸುವುದು ಸಹ ಅವನ ಕರ್ತವ್ಯವಾಗಿರುತ್ತದೆ.

ಖಿಲಾಫತ್‌ಗೆ ವಿಧೇಯತೆ ಮುಖ್ಯವಾಗಿರುವುದು ಏಕೆಂದರೆ ಲೋಕದಲ್ಲಿ ದೇವರಾಜ್ಯ ಸ್ಥಾಪಿಸಲು ಇಮಾಮರ ನೇತೃತ್ವದಲ್ಲಿ ಪರಸ್ಪರ ಸಹಕಾರ ಮತ್ತು ಪರಿಶ್ರಮ ಆವಶ್ಯಕವಾಗಿರುತ್ತದೆ. ಇಮಾಮರನ್ನು ಹೊಂದಿರದ ಇತರ ಮುಸ್ಲಿಮರೊಂದಿಗೆ ಅಹ್ಮದಿಯಾ ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿದವರನ್ನು ಹೋಲಿಸಿ ನೋಡುವುದಾದರೆ ನಮ್ಮ ಜಮಾಅತಿನ ಪ್ರಯತ್ನಗಳು ಜಯಶಾಲಿಯಾಗಲು ಕಾರಣ ಒಬ್ಬ ಇಮಾಮರ ನೇತೃತ್ವದಲ್ಲಿ ಐಕ್ಯದಿಂದ ಕಾರ್ಯನಿರತರಾದುದರಿಂದಾಗಿದೆ ಎಂದು ಸ್ಪಷ್ಟವಾಗುವುದು.

ದೇವ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನೀಡಲು ಖಿಲಾಫತ್ ಉಪದೇಶಿಸುತ್ತದೆ. ಅದು ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಲು ಆಜ್ಞಾಪಿಸುತ್ತದೆ. ಅಲ್ಲಾಹನ ತೌಹೀದನ್ನು ಸ್ಥಾಪಿಸಲು ಖಿಲಾಫತ್ ಅತ್ಯಂತವಾಗಿ ಶ್ರಮಿಸುತ್ತದೆ. ಆದರೆ ಲೌಕಿಕ ನಾಯಕರು ತಮ್ಮ ಗಡಿ ಭಾಗಗಳನ್ನು ವಿಸ್ತಾರಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಅವರು ಸುಳ್ಳು ಪ್ರತಿಷ್ಠೆಗೋಸ್ಕರ ನ್ಯಾಯವನ್ನು ತುಳಿದು ಹಾಕುತ್ತಾರೆ. ಲೋಕದ ಯಾವ ನಿರಂಕುಶ ಪ್ರಭುವಿಗೆ ತಾನು ಆಳುವ ಜನರೊಂದಿಗೆ ನಿಕಟ ಸಂಬಂಧವಿದೆ? ಆದರೆ ಆಯಾಕಾಲದ ಖಲೀಫರು ಎಲ್ಲಾ ವರ್ಗದ ಮತ್ತು ಎಲ್ಲಾ ಜನಾಂಗಗಳ ಜನರೊಂದಿಗೆ ವೈಯ್ಯಕ್ತಿಕ ಸಂಬಂಧವನ್ನು ಹೊಂದಿರುತ್ತಾರೆ. ಆಯಾಕಾಲದ ಖಲೀಫರಿಗೆ ಪ್ರತಿದಿನ ದೊರಕುವ ಪತ್ರಗಳಲ್ಲಿರುವ ವಿವರಗಳು ಲೌಕಿಕ ಜನರ ಮಟ್ಟಿಗೆ ನಂಬಲಸಾಧ್ಯವಾದಂತಹ ಸಂಗತಿಯಾಗಿದೆ. ಜನರು ತಮ್ಮ ವೈಯ್ಯಕ್ತಿಕ ಸಮಸ್ಯೆಗಳ ಬಗ್ಗೆ ಖಲೀಫರಿಗೆ ಬರೆಯುತ್ತಾರೆ. ಲೋಕದಲ್ಲಿರುವ ಪ್ರತಿಯೊಬ್ಬ ಅಹ್ಮದಿಯ ನೋವನ್ನು ಖಲೀಫರು ಗಮನಿಸುತ್ತಾರೆ. ಆಯಾಕಾಲದ ಖಲೀಫರು ಅವರಿಗೋಸ್ಕರ ಪ್ರಾರ್ಥಿಸುತ್ತಾರೆ. ಯಾವ ಲೌಕಿಕ ನಾಯಕ ರೋಗಿಗಳಿಗೋಸ್ಕರ ಪ್ರಾರ್ಥಿಸುತ್ತಾನೆ? ಯುವತಿಯರ ವಿವಾಹ ಬೇಗ ಜರಗಲಿ ಎಂದು ಯಾವ ಲೌಕಿಕ ನಾಯಕ ಆತಂಕಭರಿತನಾಗುತ್ತಾನೆ ಮತ್ತು ಅವರಿಗೋಸ್ಕರ ಪ್ರಾರ್ಥಿಸುತ್ತಾನೆ? ಯಾವ ಲೌಕಿಕ ನಾಯಕ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸುತ್ತಾನೆ? ಸರಕಾರಗಳು ನಿಶ್ಚಯವಾಗಿಯೂ ವಿದ್ಯಾಭ್ಯಾಸದ ಏರ್ಪಾಡು ಮಾಡುತ್ತವೆ ಮತ್ತು ಆರೋಗ್ಯಸೇವೆ ನೀಡುತ್ತವೆ. ಆದರೆ ಆಯಾ ಕಾಲದ ಖಲೀಫರು ಪ್ರತಿಯೊಬ್ಬ ಅಹ್ಮದಿ ಮಕ್ಕಳು ವಿದ್ಯಾವಂತರಾಗಬೇಕೆಂದೂ ಅವರಿಗೆ ಆರೋಗ್ಯಸೇವೆ ಲಭಿಸಬೇಕೆಂದೂ ಪ್ರಾಮಾಣಿಕವಾಗಿ ಆಶಿಸುತ್ತಾರೆ. ಜಮಾಅತಿಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆಯಾಗಲಿ ವ್ಯಕ್ತಿಗಳಿಗೆ ಸಂಬಂಧಪಟ್ಟ ಸಮಸ್ಯೆ ಬಗ್ಗೆಯಾಗಲಿ ಆಯಾ ಕಾಲದ ಖಲೀಫರು ಅರಿಯದೆ ಇರುವುದಿಲ್ಲ. ಅವುಗಳ ಪರಿಹಾರಕ್ಕೆ ಖಲೀಫರು ಕ್ರಮ ಕೈಗೊಂಡು ಅವುಗಳ ನಿವಾರಣೆಗೋಸ್ಕರ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಲೂ ಇರುತ್ತಾರೆ.

ನಾನು ಮತ್ತು ನನಗಿಂತ ಮೊದಲಿನ ಖಲೀಫರು ಹೀಗೆಯೇ ವರ್ತಿಸುತ್ತಿದ್ದರು. ನಾನು ನಿದ್ರಿಸುವ ಮೊದಲು ನಾನು ನನ್ನ ಯೋಚನೆಯಲ್ಲಿ ಸಂದರ್ಶಿಸದ ಯಾವುದೇ ದೇಶವಿರುವುದಿಲ್ಲ. ನಾನು ಅವರೆಲ್ಲರಿಗೋಸ್ಕರ ನಿದ್ರಿಸುವಾಗಲೂ ಎಚ್ಚರದಿಂದಿರುವಾಗಲೂ ಪ್ರಾರ್ಥಿಸುತ್ತೇನೆ. ನಾನು ಹೀಗೆ ಹೇಳುವುದು ಯಾರನ್ನೂ ಮೆಚ್ಚಿಸಲಿಕ್ಕಲ್ಲ. ಇದು ನನ್ನ ಕರ್ತವ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನು ನನ್ನ

ಕರ್ತವ್ಯಗಳನ್ನು ಮೊದಲಿಗಿಂತ ಉತ್ತಮವಾಗಿ ಈಡೇರಿಸಲು ನನಗೆ ಭಾಗ್ಯ ನೀಡಲಿ. ನಾನು ಇದನ್ನು ಇಲ್ಲಿ ಹೇಳುವುದರ ಉದ್ದೇಶವೇನೆಂದರೆ ಖಿಲಾಫತ್ ಮತ್ತು ಲೌಕಿಕ ನಾಯಕತ್ವದ ಮಧ್ಯೆ ಯಾವುದೇ ಹೋಲಿಕೆ ಇಲ್ಲ ಎಂಬುದನ್ನು ಸ್ಪಷ್ಟಪಡಿಸಲಿಕ್ಕಾಗಿದೆ.

ಇನ್ನೊಂದು ತಪ್ಪು ಗ್ರಹಿಕೆಯನ್ನು ಸಹ ನಿವಾರಿಸಲು ಬಯಸುತ್ತೇನೆ. ಅದರ ಬಗ್ಗೆ ಹಿಂದೆ ಸಹ ವಿವರಿಸಲಾಗಿದೆ. ಬೈಅತ್ ಶರ್ತಗಳಲ್ಲಿ ಖಲೀಫರ ಪ್ರತಿಯೊಂದು ಉತ್ತಮ (ಮಅ್‌ರೂಫ್) ತೀರ್ಮಾನಗಳನ್ನು ಅನುಸರಿಸುವ ಬಗ್ಗೆ ಪ್ರತಿಜ್ಞೆ ಮಾಡಲಾಗುತ್ತದೆ. ಕೆಲವು ಜನರು ಯೋಚಿಸುವುದೇನೆಂದರೆ ಯಾವುದು ಮಅ್‌ರೂಫ್ ಮತ್ತು ಯಾವುದು ಮಅ್‌ರೂಫ್ ಅಲ್ಲ ಎಂದು ತಾವೇ ನಿರ್ಧರಿಸಬಹುದು ಎಂದಾಗಿದೆ. ನಾನು ಸ್ಪಷ್ಟಪಡಿಸಲು ಬಯಸುವುದೇನೆಂದರೆ ಮಅ್‌ರೂಫ್ ಏನೆಂದು ಅಲ್ಲಾಹನು ಮತ್ತು ಅವನ ಸಂದೇಶವಾಹಕರು ವಿವರಿಸಿದ್ದಾರೆ. ಮಅ್‌ರೂಫ್ ತೀರ್ಪು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸುನ್ನತ್ (ನಡೆವಳಿಕೆ) ಪ್ರಕಾರ ನೀಡಿದ ತೀರ್ಪು ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನುಡಿದ ಭವಿಷ್ಯವಾಣಿ ಪ್ರಕಾರ ಖಿಲಾಫತ್ ನುಬುವ್ವತ್ತಿನ ಮಾರ್ಗದಲ್ಲಿ ಸ್ಥಾಪಿಸಲ್ಪಡುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಪ್ರಕಾರ ಖಿಲಾಫತ್ ಶಾಶ್ವತವಾಗಿ ಮುಂದುವರಿಯುವುದು. ಆದುದರಿಂದ ಅಂತಹ ಖಿಲಾಫತ್ ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ಗೆ ವಿರುದ್ಧವಾಗಿರಲಾರದು. ಆದುದರಿಂದ ಖಿಲಾಫತನ್ನು ಅನುಸರಿಸದೆ ಇರಲು ಸಾಧ್ಯವಿಲ್ಲ. ಅಥವಾ ಕಾಲದ ಖಲೀಫರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರ ಸುನ್ನತ್‌ಗೆ ವಿರುದ್ಧವಾಗಿ ವರ್ತಿಸಿದರೆಂದು ಸಾಬೀತು ಮಾಡಬೇಕು.

ಒಂದು ತೀರ್ಪು ತಪ್ಪೆಂದು ಸಾಬೀತುಗೊಳಿಸಲು ತುಂಬಾ ಯೋಚಿಸಬೇಕು ಮತ್ತು ಸಭ್ಯತೆಯನ್ನು ಮೀರದೆ ಖಲೀಫರಿಗೆ ಅದರ ಬಗ್ಗೆ ಬರೆಯಬೇಕು. ಆದರೆ ಸುಳ್ಳು ಪ್ರಚಾರ ಮತ್ತು ಪಿಸುಗುಟ್ಟುವಿಕೆ ಸಲ್ಲದು. ಜಮಾಅತ್ ಅಭಿವೃದ್ಧಿಗಳಿಸುವಾಗ ಕಪಟ ವಿಶ್ವಾಸಿಗಳೂ ಅಸೂಯೆ ಭರಿತ ಜನರೂ ತಮ್ಮ ಕೆಲಸ ಮಾಡುತ್ತಾರೆ. ಆದರೆ ಖಿಲಾಫತ್‌ಗೆ ಜನರು ತೋರಿಸುವ ವಿಧೇಯತೆ ಅವರ ಷಡ್ಯಂತರಗಳನ್ನು ವಿಫಲಗೊಳಿಸುತ್ತವೆ. ಅನ್ಯರ ಬಗ್ಗೆ ಕೆಡುಕನ್ನು ಆಶಿಸುವವರ ಹತ್ತಿರ ಸಹ ಹೋಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: **ನೈಜ ವಿಧೇಯತೆ ಹೃದಯದಲ್ಲಿ ಪ್ರಕಾಶವನ್ನು ಉಂಟುಮಾಡುತ್ತದೆ. ವಿಧೇಯತೆಗಿಂತ ಮಿಗಿಲಾದ ಆಧ್ಯಾತ್ಮಿಕ ಪ್ರಯತ್ನಗಳಿಲ್ಲ. ವಿಧೇಯತೆ ಹೊಂದದೆ ಐಕ್ಯತೆಯು ಸಾಧ್ಯವಿಲ್ಲ**.

ಇಸ್ಲಾಮ್ ಧರ್ಮದ ಆರಂಭ ಕಾಲದ ಚರಿತ್ರೆ ನಮಗೆ ತಿಳಿಸಿಕೊಡುವುದೇನೆಂದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶಿಷ್ಯರು ವಿಧೇಯತೆಯನ್ನು ತೋರಿಸಿ ತಮ್ಮ ಜೀವಗಳನ್ನು ಅರ್ಪಿಸಿದುದರ ಫಲವಾಗಿಯೇ ಇಸ್ಲಾಮ್ ಧರ್ಮ ಹರಡಿತು. ಇದರ ಅರ್ಥ ಇಸ್ಲಾಮ್ ಬಲ ಪ್ರಯೋಗದಿಂದ ಅಭಿವೃದ್ಧಿ ಹೊಂದಿತು ಎಂದಲ್ಲ. ವಿಧೇಯತೆ ಎಂಬ ಶಕ್ತಿಯೇ ಆದಿಕಾಲೀನ ಮುಸ್ಲಿಮರನ್ನು ವಿರೋಧಿಗಳ ದೊಡ್ಡ ಸೈನ್ಯಗಳನ್ನು ಎದುರಿಸಲು ಸಮರ್ಥರನ್ನಾಗಿ ಮಾಡಿತು. ಆದರೆ ಹಝ್ರತ್ ಮೂಸಾ ಪ್ರವಾದಿಯ ಶಿಷ್ಯರು ಅನುಸರಣೆ ತೋರಿಸದೆ ಇದ್ದುದರಿಂದ ನಲ್ವತ್ತು ವರ್ಷಗಳ ಕಾಲ ಅನುಗ್ರಹದಿಂದ ವಂಚಿತರಾದರು. ಇಂದಿನ ಕಾಲಘಟ್ಟದ ಜಿಹಾದ್ ಎಂದರೆ ನಾವು ನಮ್ಮನ್ನು ಸುಧಾರಣೆ ಮಾಡಿಕೊಂಡು ಖಲೀಫರನ್ನು ಅನುಸರಿಸಿ ಸತ್ಯಸಂದೇಶವನ್ನು ಪ್ರಚಾರ ಮಾಡುವುದಾಗಿದೆ.

ನಮ್ಮನ್ನು ನಾಶದಿಂದ ರಕ್ಷಿಸಲು ನಾವು ನಮ್ಮ ವಿಧೇಯತೆಯ ಮಟ್ಟವನ್ನು ಉನ್ನತಗೊಳಿಸಬೇಕಾದ ಅಗತ್ಯವಿದೆ. ಅಹ್ಮದಿಯಾ ಜಮಾಅತಿನ ಶತ್ರುಗಳು ನಮಗೆ ಎಷ್ಟು ಹಿಂಸೆ ನೀಡಿದರೂ, ನಿಶ್ಚಯವಾಗಿಯೂ ಅಲ್ಲಾಹನು ನಮ್ಮನ್ನು ನಮ್ಮ ಗುರಿಗೆ ತಲಪಿಸುವನು. ಆದರೆ ಇದಕ್ಕಿರುವ ಶರತ್ತೇನೆಂದರೆ ನಮ್ಮ ವಿಧೇಯತೆ ಪರಿಪೂರ್ಣವಾಗಿರಬೇಕು.

ಇತರ ಮುಸ್ಲಿಮರು ಸಹ ನಮ್ಮ ಹಾಗೆಯೇ ನಂಬಿಕೆಗಳನ್ನು ಹೊಂದಿರುತ್ತಾರೆ. ಆದರೆ ಅವರಲ್ಲಿ ಸಹನೆಯಾಗಲಿ ಧೈರ್ಯವಾಗಲಿ ಕಾಣಿಸದು. ಇಂದಿನ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಮಾತ್ರ ಸ್ಥಿರತೆ ಮತ್ತು ಧೈರ್ಯವನ್ನು ಹೊಂದಿರುತ್ತದೆ. ಇದು ಪವಿತ್ರ ಖುರ್‌ಆನಿನ ಸೂರತುಲ್ ಜುಮುಅದ ಈ ಕೆಳಗಿನ ವಚನವನ್ನು ಚಿತ್ರಿಸುತ್ತದೆ:

**"ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್"**

'ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ' (ಪವಿತ್ರ ಖುರ್‌ಆನ್ 62:4).

ಒಂಟೆ ತನ್ನ ಪ್ರಯಾಣಕ್ಕೆ ತಕ್ಕುದಾದ ಸಿದ್ಧತೆ ನಡೆಸುತ್ತದೆ ಮತ್ತು ಅದು ನಿರ್ಲಕ್ಷ್ಯತೆ ಹೊಂದಿರುವುದಿಲ್ಲ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಸತ್ಯ ವಿಶ್ವಾಸಿಗಳು ಯಾವಾಗಲೂ ಸನ್ನದ್ಧರೂ ಜಾಗರೂಕರೂ ಆಗಿರಬೇಕು. ಆದರೆ ಉತ್ತಮ ಸಿದ್ಧತೆ **ತಖ್ವ** (ಸಾತ್ವಿಕತೆ)ಯನ್ನು ಹೊಂದುವುದಾಗಿದೆ. ನಾವು ಮಾಡುವ ಆರಾಧನೆಗಳು ಮತ್ತು ಸತ್ಕರ್ಮಗಳು ಸಹ ನಮಗೆ ತರಬೇತಿ ಮತ್ತು ಸಿದ್ಧತೆಗಳನ್ನು ನೀಡುತ್ತವೆ. ಈ ಕಾಲಘಟ್ಟದ ಇಮಾಮರನ್ನು ಅಂಗೀಕರಿಸಿದ ಕಾರಣದಿಂದ ನಮಗೆ ಆಧ್ಯಾತ್ಮಿಕ ಜಲ ಲಭಿಸಿದೆ. ನಾವು ಅದನ್ನು ಸಂರಕ್ಷಿಸಿ ಅದರ ಪ್ರಯೋಜನ ಪಡೆದುಕೊಳ್ಳಬೇಕು. ಈ ಕಾಲಘಟ್ಟದ ಇಮಾಮರಿಗೆ ವಿಧೇಯರಾಗಿ ಅವರ ಮಾತುಗಳಿಗೆ ಕಿವಿಗೊಡುವವರು ಭಾಗ್ಯಶಾಲಿಗಳು. ವಿಧೇಯತೆಯನ್ನು ಮುಂದುವರಿಸುತ್ತಾ ಹೋದರೆ ಖಿಲಾಫತ್‌ನಿಂದ ಅನುಗ್ರಹಗಳನ್ನು ಗಳಿಸಬಹುದು.

ಲೌಕಿಕ ಲಾಭಗಳ ಹಿಂದೆ ಓಡುವವರಿಗೆ ಆಧ್ಯಾತ್ಮಿಕತೆಯೊಂದಿಗೆ ಸಂಬಂಧವಿರುವುದಿಲ್ಲ. ಅದೇರೀತಿ ಅಲ್ಲಾಹನ ಸಂಪ್ರೀತಿ ಬಯಸುವವರಿಗೆ ಲೌಕಿಕ ಲಾಭ ನಷ್ಟಗಳ ಬಗ್ಗೆ ಪರಿವೆಯೂ ಇಲ್ಲ. ನಾವು ಪರಿಪೂರ್ಣ ವಿಧೇಯತೆಯಲ್ಲಿ ಅಲ್ಲಾಹನ ಸಮೀಪ ತಲಪಲು ಪ್ರಯತ್ನಿಸಿ ನಮ್ಮ ಸಾತ್ವಿಕತೆ ವರ್ಧಿಸಬೇಕು. ನಮ್ಮ ಉದ್ದೇಶ ಲೋಕದಲ್ಲಿ ದೇವರಾಜ್ಯ ಸ್ಥಾಪಿಸುವುದಾಗಿದೆ. ನಾವು ಇಸ್ಲಾಮಿನ ಸಂದೇಶವನ್ನು ಹರಡಿ ಲೋಕವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪತಾಕೆಯ ಕೆಳಗೆ ತರಲು ಪರಿಶ್ರಮಿಸಬೇಕಾಗಿದೆ.

ಖಿಲಾಫತ್ ಈ ಎಲ್ಲಾ ಉದ್ದೇಶ ಲಕ್ಷ್ಯಗಳಿಗೋಸ್ಕರ ಪ್ರಯತ್ನ ಮಾಡುತ್ತಿದೆ. ಆದುದರಿಂದ ಖಿಲಾಫತ್ತಿನ ಮುಖ್ಯ ಸತ್ವವನ್ನು ಅರಿತುಕೊಳ್ಳಬೇಕಾಗಿದೆ. ಆದರೆ ಪರಿಪೂರ್ಣ ವಿಧೇಯತೆಯಿಂದ ಮಾತ್ರ ಇದು ಸಾಧ್ಯವಾಗುವುದು. ಒಬ್ಬನು ತಾನು ಎಷ್ಟು ವಿದ್ಯಾವಂತನೂ ಅಧಿಕೃತನೂ ಆಗಿರುವನೆಂದು ಭಾವಿಸುವುದಾದರೂ ಖಿಲಾಫತ್‌ಗೆ ವಿಧೇಯನಾಗದ ಒಬ್ಬನಿಗೆ ಈ ಜಮಾಅತಿನಲ್ಲಿ ಸ್ಥಾನವಿಲ್ಲ. ಅಂತಹ ವ್ಯಕ್ತಿಯ ಜ್ಞಾನ ಮತ್ತು ಬುದ್ಧಿಶಕ್ತಿ ಆಧ್ಯಾತ್ಮಿಕವಾಗಿ ಲೋಕಕ್ಕೆ ಹಿತಕರವಾಗಲಾರದು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಮಾತನ್ನು ಯಾವಾಗಲೂ ಗಮನದಲ್ಲಿ ಇರಿಸಬೇಕು: "ಮನುಷ್ಯನು ಇಮಾಮರನ್ನು ಅನುಸರಿಸುವ ಅಭ್ಯಾಸ ರೂಢಿಸಿಕೊಳ್ಳಬೇಕು."

ಬುದ್ಧಿಶಕ್ತಿ ಮತ್ತು ಜ್ಞಾನ ಆಯಾ ಕಾಲದ ಖಲೀಫರನ್ನು ಅನುಸರಿಸುವಾಗ ಮಾತ್ರ ಪ್ರಯೋಜನ ನೀಡುವುದು. ಒಬ್ಬನು ವಿಷಯಗಳ ಬಗ್ಗೆ ಸ್ವಂತ ವ್ಯಾಖ್ಯಾನ ಮಾಡುವುದನ್ನು ನಿಲ್ಲಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವ್ಯಾಖ್ಯಾನ ಪ್ರಕಾರ "ಅಲ್ಲಾಹನಿಗೆ ವಿಧೇಯರಾಗಿರಿ. ಅವನ ಸಂದೇಶ ವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ" (4:60) ಎಂಬ ಪವಿತ್ರ ಖುರ್‌ಆನಿನ ಆಜ್ಞೆಯನ್ನು ಅನುಸರಿಸುವ ಮೂಲಕ ಮಾತ್ರ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಲು ಸಾಧ್ಯವಾಗುವುದು.

ಹುದ್ದೇದಾರರು ಖಿಲಾಫತನ್ನು ಅನುಸರಿಸುವವರಾಗದಿದ್ದರೆ ಮತ್ತು ತಮ್ಮ ಸ್ವಂತ ವ್ಯಾಖ್ಯಾನಗಳನ್ನು ಕೈಬಿಡದಿದ್ದರೆ "ನಿಮ್ಮ ಅಧಿಕಾರಿಗಳು" ಎಂಬ ಪರಿದಿಯೊಳಗೆ ಅವರು ಬರಲಾರರು. ಅವರು ಆಯಾ ಕಾಲದ ಖಲೀಫರ ಪ್ರತಿಯೊಂದು ಶಬ್ದವನ್ನು ಪಾಲಿಸುವವರಾಗಬೇಕು. ಕೆಲವು ವಿಷಯಗಳ ಬಗ್ಗೆ ವಿಚಾರಣೆ ನಡೆಸುವಾಗ ದೂರು ಇತ್ತವರು ಯಾರೆಂದು ಕಂಡು ಹಿಡಿಯಲು ಪ್ರಯತ್ನಿಸಲಾಗುತ್ತದೆ. ಯಾವುದೇ ಹುದ್ದೇದಾರ ಆರೀತಿ ಗಮನ ಹರಿಸುವುದು ಸರಿಯಲ್ಲ. ಅವರೊಂದಿಗೆ ತಪಾಸಣೆ ನಡೆಸಲು ಹೇಳಿದರೆ ಅವರು ಅದರ ಬಗ್ಗೆ ಸ್ವಂತ ವ್ಯಾಖ್ಯಾನವನ್ನೂ ನೀಡಬಾರದು. ಖಲೀಫರ ನಿರ್ದೇಶ ಸರಿಯಾಗಿ ಅರ್ಥವಾಗದಿದ್ದರೆ ಅದರ ಬಗ್ಗೆ ಸ್ವಯಂ ಊಹೆ ನಡೆಸದೆ, ಆಯಾ ಕಾಲದ ಖಲೀಫರಿಂದ ಅದರ ವಿವರಣೆಯನ್ನು ಕೇಳಿಪಡೆಯಬೇಕು.

ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯೂ ಖಿಲಾಫತ್‌ಗೆ ವಿಧೇಯನಾದರೆ ನಾವು ಆಧ್ಯಾತ್ಮಿಕ ಉನ್ನತಿಗಳಿಸುವೆವು. ನಮ್ಮ ವಿಶ್ವಾಸ ಪರ್ವತಗಳ ಹಾಗೆ ಬಲಿಷ್ಠವಾಗುವುದು ಮತ್ತು ಇಸ್ಲಾಮ್ ಲೋಕದ ಎಲ್ಲಾ ದಿಕ್ಕುಗಳಲ್ಲೂ ಹರಡುವುದು.

ಇಸ್ಲಾಮ್ ಧರ್ಮದ ಪ್ರಚಾರಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಒಂದು ಹೇಳಿಕೆಯನ್ನು ಬ್ಯಾನರ್‌ನಲ್ಲಿ ಪ್ರದರ್ಶಿಸಿದ ಬಗ್ಗೆ ಉಂಟಾದ ಆಕ್ಷೇಪದ ಕುರಿತು ಹೇಳಲು ಬಯಸುತ್ತೇನೆ. ಜರ್ಮನಿಯ ಜಲ್ಸ ಸಾಲಾನದಲ್ಲಿ ಹೀಗೆ ಬ್ಯಾನರ್ ಬರೆಯಲಾಗಿತ್ತು: "ಜರ್ಮನಿಯನ್ನು ಜಯಿಸಿದರೆ ಯುರೋಪನ್ನು ಜಯಿಸಬಹುದು". ಇದರ ಬಗ್ಗೆ ಎದ್ದ ಆಕ್ಷೇಪವೇನೆಂದರೆ ನಾವು ಶಾಂತಿಯನ್ನು ಪ್ರತಿಪಾದಿಸುತ್ತೇವಾದರೂ ನಮ್ಮ ಉದ್ದೇಶಲಕ್ಷ್ಯ ಅಪಾಯಕರವಾಗಿದೆ ಎಂದು. ಈ ಆಕ್ಷೇಪ ಅಜ್ಞಾನದ ಕಾರಣದಿಂದ ಅಥವಾ ಪಿತೂರಿ ನಡೆಸುವ ಉದ್ದೇಶದಿಂದ ಮಾಡಲಾಗಿದೆ. ಇದು ಮುಸ್ಲಿಮರ ವಿರುದ್ಧ ಉತ್ತೇಜಿಸುವ ಅಪಾಯಕರ ಹೆಜ್ಜೆ ಆಗಿದೆ. ಇದರ ಬಗ್ಗೆ ವಿಶದೀಕರಿಸಿದವನಿಗೆ ಸಹ ಸರಿಯಾದ ಜ್ಞಾನವಿರಲಿಲ್ಲ. ಜರ್ಮನಿಯ ಜನರು ಬಹಳ ಬುದ್ಧಿಶಾಲಿಗಳಾಗಿದ್ದಾರೆ. ಅವರಿಗೆ ನಮ್ಮ ಧರ್ಮ ಪ್ರಚಾರ ಮತ್ತು ಮಾನವೀಯ ಸೇವೆ ಬಗ್ಗೆ ತಿಳಿದಿದೆ. ಇಸ್ಲಾಮಿನ ಸುಂದರ ಉಪದೇಶಗಳನ್ನು ಪ್ರಚಾರ ಮಾಡಿ ಜನರನ್ನು ಇಸ್ಲಾಮಿಗೆ ತರಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಅವರಿಗೆ ತಿಳಿದಿದೆ. ಈ ಬ್ಯಾನರ್‌ನಲ್ಲಿ ಬರೆದ **"ಜಯಿಸು"** ಎಂಬ ಪದ ಶಕ್ತಿ ಪ್ರಯೋಗಿಸುವ ಅಥವಾ ರಾಜ್ಯಾಡಳಿತೆ ಗಳಿಸುವ ಅಭಿಲಾಷೆಯನ್ನು ಸೂಚಿಸುವುದಿಲ್ಲ. ನಾವು ನಮ್ಮ ಸಂದೇಶವನ್ನು ಜರ್ಮನಿ, ಯುರೋಪಿನಲ್ಲಿ ಮಾತ್ರವಲ್ಲ ಲೋಕದ ಎಲ್ಲಾ ಕಡೆ ಬಿತ್ತರಿಸಲು ಬಯಸುತ್ತೇವೆ. ಆದರೆ ಶಕ್ತಿ ಬಳಸಿ ಈ ಕೆಲಸ ನಾವು ಮಾಡುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಜರ್ಮನ್ ಜನಾಂಗದ ಮಹತ್ವ ಮತ್ತು ಯುರೋಪಿನಲ್ಲಿ ಅವರ ಪ್ರಾಧಾನ್ಯತೆಯನ್ನು ಸೂಚಿಸಿ ಜರ್ಮನರು ಇಸ್ಲಾಮನ್ನು ಮನವರಿಕೆ ಮಾಡಿದರೆ ಯುರೋಪಿನ ಉಳಿದ ಭಾಗದ ಜನರು ಸಹ ಅದನ್ನು ಮನವರಿಕೆ ಮಾಡಿಕೊಳ್ಳುವರು ಎಂದು ಹೇಳಲು ಬಯಸಿದ್ದರು. ಇದು ಸತ್ಯವಾಗಿದೆ, ಯುರೋಪಿಯನ್ ಯೂನಿಯನ್‌ನಲ್ಲಿ ಅವರೇ ಮುಂದಾಳು ಆಗಿದ್ದಾರೆ. ಅವರ ಸಾಮರ್ಥ್ಯ ಸ್ವಯಂ ಸ್ಪಷ್ಟವಾಗಿದೆ.

(ಹಝ್ರತ್ ಖಲೀಫತುಲ್ ಮಸೀಹ್ ವೀಸ್‌ಬಾಡೆನ್‌ನಲ್ಲಿ ಒಂದು ಹೊಸ ಮಸ್‌ಜಿದ್‌ಗೆ ಕೆಲವು ದಿನಗಳ ಹಿಂದೆ ಅಸ್ತಿಭಾರ ಹಾಕಿದ ಕುರಿತು ಪ್ರಸ್ತಾಪಿಸಿದರು. ಆಗ ಜರ್ಮನ್ ಮೂಲದ ಜನರು ಅಲ್ಲಿಗೆ ಆಗಮಿಸಿದ್ದರು. ಹುಝೂರರು ಇಸ್ಲಾಮಿನ ಉಪದೇಶಗಳ ಬಗ್ಗೆ ವಿವರಿಸಿದಾಗ ಎಲ್ಲರೂ ಅದನ್ನು ಮೆಚ್ಚಿದ ಬಗ್ಗೆ ಸಹ ವಿವರಣೆ ನೀಡಿದರು)

ಹುಝೂರ್ ಹೇಳುತ್ತಾರೆ: ನಾವು ಪ್ರಾಮಾಣಿಕವಾಗಿ ಕೆಲಸ ಮಾಡಿ ಅಲ್ಲಾಹನ ಸಹಾಯ ಯಾಚಿಸುವುದಾದರೆ ಈ ಜನರು ಅಥವಾ ಇವರ ಮುಂದಿನ ಪೀಳಿಗೆ ಇಸ್ಲಾಮ್‌ಗೆ ಬರುವುದು. ಅಲ್ಲಾಹನು ಬಯಸುವವರನ್ನು ಇಸ್ಲಾಂ ಧರ್ಮ ಸ್ವೀಕರಿಸುವಂತೆ ಅವನು ಮಾಡುವನು. ನಾವು ಹೆದರಬೇಕಾಗಿಲ್ಲ. ನಾವು ಪ್ರತಿರೋಧಿಸಬೇಕಾಗಿಯೂ ಇಲ್ಲ. ಲೌಕಿಕ ಅಧಿಕಾರ ಗಳಿಕೆ ನಮ್ಮ ಉದ್ದೇಶವಲ್ಲ. ನಮ್ಮ ಕೆಲಸ ಜನರ ಹೃದಯದಲ್ಲಿ ಅಲ್ಲಾಹನ ಬಗ್ಗೆ ಪ್ರೀತಿಯನ್ನು ತುಂಬಿಸುವುದಾಗಿದೆ. ಇದನ್ನು ನಾವು ಮುಂದುವರಿಸುವೆವು. ಇದಕ್ಕೋಸ್ಕರ ಪ್ರತಿಯೊಬ್ಬ ಅಹ್ಮದಿಯೂ ಖಿಲಾಫತ್‌ಗೆ ವಿಧೇಯನಾಗಿರುವುದು ಆವಶ್ಯಕವಾಗಿದೆ.

--------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 06-06-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By: **Kannada Khutuba Desk** (comes under the **Kannada Isha'at Team**)*

*Ahmadiyya Muslim Jama`at, Karnataka*

*Email*: **khutuba.kannada@gmail.com**